# ಸಾಹಿತ್ಯ ಓದುವ ಅಭಿರುಚಿ ಬೆಳೆಸಿಕೊಳ್ಳಿ

## ಕನ್ನಡ ಮಹಾ ಕಾವ್ಯ ಪರಂಪರೆ ಹಾಗೂ ಹರಿಶ್ಚಂದ್ರ ಕಾವ್ಯ ಉಪನ್ಯಾಸ

ಪ್ರಜಾವಾಣಿ ವಾರ್ತೆ



ಆನೇಕಲ್‌ನ ಡಾ.ಎಸ್.ಗೋಪಾಲರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ಮಹಾ ಕಾವ್ಯ ಪರಂಪರೆ ಹಾಗೂ ಹರಿಶ್ಚಂದ್ರ ಕಾವ್ಯ ಉಪನ್ಯಾಸ ಕಾರ್ಯಕ್ರಮವನ್ನು ಸಾಹಿತಿ ಶೂದ್ರ ಶ್ರೀನಿವಾಸ್ ಉದ್ಘಾಟಿಸಿದರು

ಆನೇಕಲ್: ಸಾಹಿತ್ಯ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಕಥೆ, ಕಾದಂಬರಿ, ನಾಟಕ, ಕಾವ್ಯಗಳನ್ನು ಓದುವ ಅಭಿರುಚಿಯನ್ನು ಬೆಳೆಸುವ ನಿಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ಪ್ರಯತ್ನಗಳಾಗಬೇಕು ಎಂದು ಸಾಹಿತಿ ಶೂದ್ರ ಶ್ರೀನಿವಾಸ್ ನುಡಿದರು.

ಅವರು ಪಟ್ಟಣದ ಡಾ.ಎಸ್. ಗೋಪಾಲರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಅನಿಕೇತನ ಸಾಹಿತ್ಯಿಕ ಚಿಂತನಾ ವೇದಿಕೆಯ ವತಿಯಿಂದ ಆಯೋಜಿಸಿದ್ದ ಕನ್ನಡ ಮಹಾ ಕಾವ್ಯ ಪರಂಪರೆ ಹಾಗೂ ಹರಿಶ್ಚಂದ್ರ ಕಾವ್ಯ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಸಾಹಿತ್ಯವನ್ನು ಓದುವ ಅಭಿರುಚಿ ಬೆಳೆಸಿಕೊಂಡರೆ ನಮ್ಮ ಪರಂಪರೆಗಳ ಬಗ್ಗೆ ಅರಿವಾಗುವುದರ ಜೊತೆಗೆ ಜ್ಞಾನದ ಕಣಜ ತುಂಬುತ್ತದೆ. ಯಾವುದೇ ವಿಚಾರದ ಬಗ್ಗೆ ಮಾತನಾಡುವ ವಿಮರ್ಶಿಸುವ ಶಕ್ತಿ ಬರುತ್ತದೆ ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಸಲಹಾ ಸಮಿತಿ ಸದಸ್ಯೆ ಪದ್ಮಿನಿ ನಾಗರಾಜು ಮಾತನಾಡಿ, ಅಕಾಡೆಮಿಯು 22 ಭಾಷೆಗಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಬಳಕೆಯಾಗದೇ ಹಲವಾರು ಭಾಷೆಗಳು ನಶಿಸಿ ಹೋಗುತ್ತಿವೆ. ಭಾಷೆ ಬಳಕೆಯಾದಷ್ಟು ಬೆಳವಣಿಗೆಯಾಗುತ್ತದೆ. ಕನ್ನಡ ಭಾಷೆ ಅತ್ಯಂತ ಶ್ರೀಮಂತ ಭಾಷೆ. ಕನ್ನಡ ಕಾವ್ಯಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಹೇಳಿದರು.

ಕವಿ ಎಲ್.ಎನ್.ಮುಕುಂದರಾಜ್, ಹರಿಶ್ಚಂದ್ರ ಕಾವ್ಯದ ಬಗ್ಗೆ ಮಾತನಾಡಿ, ಹರಿಶ್ಚಂದ್ರ ಕಾವ್ಯ ಸತ್ಯ, ಪ್ರಾಮಾಣಿಕತೆಗಾಗಿ ನೂರಾರು ವರ್ಷಗಳಿಂದ ಸಾಕ್ಷಿಯಾಗಿರುವ ಕಾವ್ಯವಾಗಿದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದ ಮೂಲಕ ಜನರಲ್ಲಿ ಮೌಲ್ಯಗಳನ್ನು ಬೆಳೆಸುವಲ್ಲಿ ಶ್ರಮಿಸಿದ್ದಾನೆ. ಅಂದಿನ ಕಾಲದಿಂದಲೂ ಜಾತೀಯತೆಯಿತ್ತು. ಇದನ್ನು ಹೋಗಲಾಡಿಸಲು ರಾಘವಾಂಕ ತನ್ನ ಕಾವ್ಯದಲ್ಲಿ ಪ್ರಯತ್ನ ಮಾಡಿದ್ದಾನೆ ಎಂದರು.

ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ. ಸತ್ಯ, ಪ್ರಾಮಾಣಿಕತೆಯನ್ನು ಎತ್ತಿ ಹಿಡಿದಿರುವ ಹರಿಶ್ಚಂದ್ರ ಕಾವ್ಯ ಇಂದಿಗೂ ಪ್ರಸ್ತುತವಾಗಿದೆ. ಜನರಲ್ಲಿ ಮಾನವೀಯತೆ, ಮೌಲ್ಯಗಳನ್ನು ಬೆಳೆಯಲು ಕಾವ್ಯ, ಕಾದಂಬರಿ, ಸಾಹಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಧ್ಯಾಪಕಿ ಧನಲಕ್ಷ್ಮೀ, ಮುಖಂಡರಾದ ಆದೂರು ಪ್ರಕಾಶ್, ಭೈರಪ್ಪ ಮುಂತಾದವರು ಹಾಜರಿದ್ದರು.

# ಕನ್ನಡದ ಕಂಪು ಎಲ್ಲೆಡೆ



ಕನ್ನಡ ಮಹಾಕಾವ್ಯ ಪರಂಪರೆ ಮತ್ತು ಹರಿಶ್ಚಂದ್ರಕಾವ್ಯ ಉಪನ್ಯಾಸವನ್ನು ಹಿರಿಯ ಸಾಹಿತಿ ಶೂದ್ರ ಶ್ರೀನಿವಾಸ್ ಉದ್ಘಾಟಿಸಿದರು.

● ಆನೇಕಲ್

ಕನ್ನಡ ಸಾಹಿತ್ಯದ ಕಂಪನ್ನುಎಲ್ಲೆಡೆ ಪಸರಿಸುವಜವಾಬ್ದಾರಿನಮ್ಮದಾಗಬೇಕು ಎಂದು ಹಿರಿಯ ಸಾಹಿತಿ ಶೂದ್ರ ಶ್ರೀನಿವಾಸ್ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಅನಿಕೇತನ ಸಾಹಿತ್ಯಿಕ ಚಿಂತನ ವೇದಿಕೆ ಹಾಗೂ ಡಾ.ಎಸ್.ಗೋಪಾಲ ರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ಕನ್ನಡ ಮಹಾಕಾವ್ಯ ಪರಂಪರೆ ಮತ್ತು ಹರಿಶ್ಚಂದ್ರಕಾವ್ಯ ಉಪನ್ಯಾಸದಲ್ಲಿ ಭಾಗವಹಿಸಿ ಮಾತನಾಡಿದರು. ಸಾಹಿತ್ಯಗಳನ್ನು ನಾವು ಓದಬೇಕು, ಇದರಿಂದ ನಮ್ಮ ಪರಂಪರೆಗಳ ಬಗ್ಗೆ ಅರಿವಾಗುವುದರ ಜೊತೆ ಮಾಹಿತಿಗಳ ಕಣಜ ಹೆಚ್ಚಾಗುತ್ತದೆ ಎಂದರು.

ಲೇಖಕಿ ಪದ್ಮಿನಿ ನಾಗರಾಜ್ ಮಾತನಾಡಿ ನಮ್ಮಲ್ಲಿ ಇತ್ತೀಚೆಗೆ ಕೆಲವು ಭಾಷೆಗಳು ನಶಿಸಿಹೋಗುತ್ತಿವೆ. ಸಾಹಿತ್ಯ ಅಕಾಡೆಮಿ ಸಮಿತಿಯು 22 ಭಾಷೆಗಳ ಸಾಹಿತ್ಯಕ್ಕಾಗಿ ಕೆಲಸ ಮಾಡುತ್ತಿರುವ ಸಮಿತಿಯಾಗಿದೆ ಎಂದರು.

ಆನೇಕಲ್ ತಾಲೂಕಿನ ಇತಿಹಾಸವನ್ನುಅರಿತ ಸಾಹಿತಿ ಶೂದ್ರ ಶ್ರೀನಿವಾಸ್ ಅವರ ಪುಸ್ತಕಗಳ ಬಗ್ಗೆ ತಿಳಿದುಕೊಳ್ಳಬೇಕು. ಕಾಡುಹಾದಿಯ ಹೂಗಳು ಎನ್ನುವ ಚಲನ ಚಿತ್ರವನ್ನು ನೋಡಬೇಕು.

ಕೆಲವೆಡೆ ಶಾಲೆಯಲ್ಲಿ ಶಿಕ್ಷಕರೇ ಮಕ್ಕಳಿಗೆ ತಿಳಿ ಹೇಳುವ ಕೆಲಸ ಮಾಡುತ್ತಿಲ್ಲ ಎನ್ನುವ ನೋವು ಕಾಡುತ್ತದೆ. ಎಂದರು.

ಸಲಹಾ ಸಮಿತಿಯ ಸದಸ್ಯ ಎಲ್. ಎನ್.ಮುಕುಂದರಾಜ್ ಉಪನ್ಯಾಸದಲ್ಲಿ, ಕಾವ್ಯ ಕೇವಲ ಬರೆದವರದ್ದಲ್ಲ, ಯಾರು ಓದುತ್ತಾರೋ ಅವರದ್ದು. ಕನ್ನಡದ ಪರಂಪರೆ ಬಿಂಬಿಸುವುದೇ ಕಷ್ಟ. ಕವಿರಾಜ ಮಾರ್ಗ, ಪಂಪ, ರನ್ನ, ಜನ್ನರೊಡನೆ ವಚನಗಳ ಮೂಲಕ ಶರಣರು ನಮ್ಮ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದ್ದಾರೆ ಎಂದರು.

ಪ್ರೊಫೆಸರ್ ಧನಲಕ್ಷ್ಮಿ, ಸಾಹಿತಿ ಆದೂರು ಪ್ರಕಾಶ್, ಬೈರಪ್ಪ, ಮತ್ತಿತರರು ಇದ್ದರು.

# ‘ಕನ್ನಡ ಸಾಹಿತ್ಯದ ಕಂಪು ಪಸರಿಸುವ ಜವಾಬ್ದಾರಿ ನಮ್ಮದು’

ಆನೇಕಲ್: ಕನ್ನಡ ಸಾಹಿತ್ಯದ ಕಂಪನ್ನು ಎಲ್ಲೆಡೆ ಪಸರಿಸುವ ಜವಾಬ್ದಾರಿ ನಮ್ಮದಾಗಬೇಕು ಎಂದು ಹಿರಿಯ ಸಾಹಿತಿ ಶೂದ್ರ ಶ್ರೀನಿವಾಸ್ ಕಿವಿಮಾತು ಹೇಳಿದರು.

ಕೇಂದ್ರ ಸಾಹಿತ್ಯ ಆಕಾಡೆಮಿ ಹಾಗೂ ಅನಿಕೇತನ ಸಾಹಿತ್ಯಿಕ ಚಿಂತನ ವೇದಿಕೆ ಹಾಗೂ ಡಾ.ಎಸ್.ಗೋಪಾಲ ರಾಜು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ, ಕನ್ನಡ ಮಹಾಕಾವ್ಯ ಪರಂಪರೆ ಮತ್ತು ಹರಿಶ್ಚಂದ್ರ ಕಾವ್ಯ ಉಪನ್ಯಾಸದಲ್ಲಿ ಭಾಗವಹಿಸಿ ಮಾತನಾಡಿ, ಸಾಹಿತ್ಯಗಳನ್ನು ನಾವು ಓದಬೇಕು. ಇದರಿಂದ ನಮ್ಮ ಪರಂಪರೆಗಳ ಬಗ್ಗೆ ಅರಿವಾಗುದರ ಜೊತೆಗೆ ಮಾಹಿತಿಗಳ ಕಣಜ ಹೆಚ್ಚಾಗುತ್ತದೆ ಎಂದರು.

ಕೇಂದ್ರೀಯ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿಯ ಸದಸ್ಯೆ, ಲೇಖಕಿ ಪದ್ಮಿನಿ ನಾಗರಾಜ್ ಮಾತನಾಡಿ, 22 ಭಾಷೆಗಳಿಗೆ ಕೆಲಸ ಮಾಡುತ್ತಿರುವ ಸಮಿತಿ ಸಾಹಿತ್ಯ ಅಕಾಡೆಮಿ. ನಮ್ಮಲ್ಲಿ ಇತ್ತೀಚೆಗೆ ಕೆಲವು ಭಾಷೆಗಳು ನಶಿಸಿ ಹೋಗುತ್ತಿವೆ.

ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಆನೇಕಲ್ ತಾಲ್ಲೂಕಿನಲ್ಲಿ ಸಾಹಿತ್ಯದ ಬಗ್ಗೆ ವಿಧ್ಯಾರ್ಥಿಗಳು ತಿಳಿದುಕೊಳ್ಳಬೇಕಿದೆ.

ಕೇಂದ್ರೀಯ ಸಾಹಿತ್ಯಅಕಾಡೆಮಿಕನ್ನಡ ಸಲಹಾ ಸಮಿತಿಯ ಸದಸ್ಯಎಲ್. ಎನ್. ಮುಕುಂದರಾಜ್ ವಿದ್ಯಾರ್ತಿಗಳಿಗೆ ಸಾಹಿತ್ಯಉಪನ್ಯಾಸವನ್ನು ನಿಡುತ್ತಾ, ಕಾವ್ಯ ಕೇವಲ ಬರೆದ್ದವರದ್ದಲ್ಲ ಬದಲಾಗಿಯಾರುಓದುತ್ತಾರೋಅವರದ್ದು ಎನ್ನುವುದು ನನ್ನ ಭಾವನೆ. ಬದುಕಿನಲ್ಲಿಆದರ್ಶವನ್ನುತರುವ ಸಾಹಿತ್ಯ ನಮ್ಮಲ್ಲಿ ಸಾಕಷ್ಟು ಇದೆ. ಕನ್ನಡದ ಪರಂಪರೆ ಬಿಂಬಿಸುವುದೇಕಷ್ಟ.ಕವಿರಾಜ ಮಾರ್ಗಕರ್, ಪಂಪಾ ಮಹಾಕವಿ, ರನ್ನ, ಜನ್ನ ಅಂದಿನ ಕಾಲದಲ್ಲೇ ಶರಣ ಚಳುವಳಿ ಕಟ್ಟಿ ಬೆಳೆಸಿದ್ದಾರೆ.ಎಂದರು.